ಆ) ಹಾಗಿದ್ದಲ್ಲಿ ಯಾವ ಯಾವ ವಸ್ತುಗಳು ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ಸಿಗಬಹುದು ;

ಇ) ೧೯೮೯-೯೦ನೇ ಸಾಲಿನಲ್ಲಿ ಈ ಔಷಧಿಗಾಗಿ, ದತ್ತಿಗಾಗಿ ಮತ್ತು ಇನ್ನು ಮಂಜೂರಾದವುಗಳಿಗಾಗಿ ವೆಚ್ಚ ಮಾಡಿದ ಒಟ್ಟು ಹಣವೆಷ್ಟು ?

ಶ್ರೀ ಕೆ.ಜೆ. ಜಾರ್ಜ್ (ಸಾರಿಗೆ ಸಚಿವರು).--

ಆ) ನಿಗಮದ ಬಹುತೇಕ ಬಸ್ಸುಗಳಲ್ಲಿ ಪ್ರಥಮ ಚಿಕಿತ್ಸಾ ಪೆಟ್ಟಿಗೆಯನ್ನು ಇಡಲು ವ್ಯವಸ್ಥೆ ಮಾಡಿರುತ್ತದೆ. ಆದರೆ ಕೆಲವು ಬಸ್ಸುಗಳಲ್ಲಿ ಆಕಸ್ಮಿಕವಾಗಿ ಇಲ್ಲದೆ ಇದ್ದ ಪಕ್ಷದಲ್ಲಿ ಇಡಲು ವ್ಯವಸ್ಥೆ ಮಾಡಲಾಗುತ್ತದೆ.

ಆ) ಪ್ರಥಮ ಚಿಕಿತ್ಸಾ ಪೆಟ್ಟಿಗೆಯಲ್ಲಿ ಇರುವ ವಸ್ತುಗಳ ಈ ಕೆಳಕಂಡಂತಿದೆ.

೧. ಬೆರಳುಗಳಿಗೆ ಡ್ರೆಸ್ಸು ಮಾಡಲು ೨೫ ನಂ. ಸ್ಟರಲೈಸ್ಡ್ ಮಾಡಿದ ಬಟ್ಟೆ.

೨. ಕೈ ಮತ್ತು ಕಾಲುಗಳಿಗೆ ಡ್ರಸ್ಸು ಮಾಡಲು ೧೨ ನಂ. ಸ್ಟರಲೈಸ್ಡ್ ಮಾಡಿದ ಬಟ್ಟೆ

೩. ಸುಟ್ಟ ಗಾಯಗಳಿಗೆ ಡ್ರೆಸ್ ಮಾಡುವ ಸಾಮಗ್ರಿಗಳು.

೪. ಹತ್ತಿಯ ಉಂಡೆ (ಸ್ಟರಲೈಸ್ಡ್) ಒಂದು.

೫. ಶೇಕಡಾ ೨ ಬಲವಿರುವ ಆಯೋಡಿನ್ ಬಾಟಲ್ ಒಂದು.

೬. ಡೆಟಾಲ್ ಬಾಟಲ್ ಒಂದು.

ಇ) ಈ ಔಷಧಿಗಾಗಿ ವೆಚ್ಚ ಮಾಡುವ ಅಧಿಕಾರವನ್ನು ಆಯಾ ವಿಭಾಗ ನಿಯಂತ್ರಣಾಧಿಕಾರಿಗಳಿಗೆ ನೀಡಲಾಗಿದೆ. ಈ ಬಾಬ್ತು ಭರಿಸಿದ ವಿವರಗಳು ಸದ್ಯಕ್ಕೆ ಲಭ್ಯವಿಲ್ಲ.

ಚಿಂತಾಮಣಿ ತಾಲ್ಲೂಕಿನ ಪಿಕ್‌ಅಪ್‌ಗಳು

೭೪೬. ಶ್ರೀ ಚೌಡರೆಡ್ಡಿ (ಚಿಂತಾಮಣಿ).--ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.--

ಆ) ಚಿಂತಾಮಣಿ ತಾಲ್ಲೂಕಿನ ಮಿಂಡಿಗಲ್ ಪಿಕ್‌ಅಪ್‌ಗಳಿಂದ ಹೆಚ್ಚುವರಿ ನೀರನ್ನು ಅನೇಕ ಕೆರೆಗಳಿಗೆ ಪೂರೈಸಲು ಕಾಲುವೆಯನ್ನು ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಕೆಲಸದ ಮೇಲೆ ಇಲ್ಲಿಯವರೆಗೆ ಖರ್ಚಾಗಿರುವ ಹಣವೆಷ್ಟು ?

ಇ) ಈ ಕಾಲುವೆಯು ಪೂರ್ಣವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಎಷ್ಟು ವರ್ಷಗಳಿಂದ ಈ ಕೆಲಸ ಬಾಕಿ ಇದೆ ಮತ್ತು ಪೂರ್ಣವಾಗದಿರಲು ಕಾರಣಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).--

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ರೂ. ೧೧,೪೬,೬೮೦

ಇ) ಕರ್ನಾಟಕ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಮೇರೆಗೆ ೧೯೮೮ರಿಂದ ಕೆಲಸ ನಿಲ್ಲಿಸಲಾಗಿದೆ.

ತುಮಕೂರು ಜಿಲ್ಲೆಯಲ್ಲಿ ಹೇಮಾವತಿ ನಾಲಾ ಕೆಲಸಗಳ ಪ್ರಗತಿ

೭೯೦. ಶ್ರೀ ಕೆ. ಲಕ್ಕಪ್ಪ (ಕಣಿಗಲ್).--ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.--

ಆ) ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ಹರಿಸಲು ಬೇಕಾಗುವ ಪ್ರಾಯಶಃ ಕಾಲಾವಧಿ ;

ಆ) ಈ ಯೋಜನೆಯನ್ನು ತ್ವರಿತಗತಿಯಲ್ಲಿ ಕಾರ್ಯಗತ ಮಾಡಲು ಸಾಕಷ್ಟು ಹಣ ವ್ಯಯ ಮಾಡಲಾಗಿದೆಯೇ ;

ಇ) ಹಾಗಿದ್ದಲ್ಲಿ, ಆದರ ಬಗ್ಗೆ ವಿವರಗಳು ;

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).--

ಅ) ಎಂಟನೇ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ.

ಆ) ರಾಜ್ಯದ ಆರ್ಥಿಕ ಸಂಪನ್ಮೂಲವನ್ನು ಸರಿಸಿ ವ್ಯಯ ಮಾಡಲಾಗಿದೆ.

ಇ) ತಂಬಾಕೂರು ಹಾಗೂ ನಾಗಮಂಗಲ ಉಪ ನಾಲೆಗಳಿಗೆ ಕಳೆದ ೩ ವರ್ಷಗಳಿಂದ ವ್ಯಯ ಮಾಡಲಾಗಿರುವ ಹಾಗೂ ಪ್ರಸ್ತುತ ೯೦-೯೧ನೇ ಸಾಲಿನಲ್ಲಿ ಒದಗಿಸಲಾದ ಅನುದಾನದ ವಿವರಗಳು ಕೆಳಕಂಡಂತಿವೆ ;

೧೯೮೩-೮೪	...	೨೭೦ ಲಕ್ಷ ರೂ.ಗಳು
೧೯೮೪-೮೫	...	೩೩೩ ಲಕ್ಷ ರೂ.ಗಳು
೧೯೮೫-೯೦	...	೧೧೪೦ ಲಕ್ಷ ರೂ.ಗಳು
೧೯೯೦-೯೧	...	೧೮೦೬ ಲಕ್ಷ ರೂ.ಗಳು (ಅನುದಾನ)

ರಾಜ್ಯದ ಅಭಿವೃದ್ಧಿಯ ಬಗ್ಗೆ ಪ್ರಗತಿಯನ್ನು ಪರಿಶೀಲಿಸಲು ಸಮಿತಿಯ ರಚನೆ

೭೯೯. ಶ್ರೀ ಕೆ. ಲಕ್ಕಪ್ಪ(ಕುಣಿಗಲ್).--ಮಾನ್ಯ ಕಾನೂನು, ಯೋಜನೆ ಮತ್ತು ಸಂಸದೀಯ ವ್ಯವಹಾರಗಳು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.--

ಅ) ರಾಜ್ಯದ ಅಭಿವೃದ್ಧಿಯ ಬಗ್ಗೆ ಪ್ರಗತಿಯನ್ನು ಪರಿಶೀಲಿಸಲು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆಯೇ ? (ಜಿಲ್ಲಾವಾರು ಎಲ್ಲ ಅಂಕಿ ಅಂಶಗಳನ್ನು ಒದಗಿಸಂವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು).--

ಅ) ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಉನ್ನತ ಸಮಿತಿಯು ಮೂರು ತಿಂಗಳಿಗೆ ಒಂದು ಬಾರಿ ಮತ್ತು ರಾಜ್ಯ ಮಟ್ಟದ ಅಧಿಕಾರಿಗಳ ಪರಿಶೀಲನಾ ಸಮಿತಿಯು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ತಿಂಗಳಿಗೆ ಒಂದು ಬಾರಿ ಸಭೆ ಸೇರಿ, ಮುಖ್ಯವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪ್ರತಿನಿಧಿಸುವ ಕರ್ನಾಟಕ ೨೦ ಅಂಶ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸುತ್ತದೆ. ಜಿಲ್ಲಾ ಮಂತ್ರಿ ತಾಲ್ಲೂಕು ಮಟ್ಟಗಳಲ್ಲಿಯೂ ಸಹ ಪ್ರಗತಿಯನ್ನು ಪರಿಶೀಲಿಸಲು ಪರಿಶೀಲನಾ ಸಮಿತಿಗಳು ಇವೆ.

ಆಯ್ದ ಮುಖ್ಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಯ ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.